## ನಿಮ್ಮೊಡನೆ

# ಕಳೆದ ಬೇಸಗೆ ಕಲಿಸಿದ ಪಾಠ ಮರೆಯದಿರೋಣ ಬೇಸಗೆಯ ಝಳ ಎದುರಿಸಲು ಸಿದ್ಧರಾಗೋಣ

ಬಿಟ್ಟೇನೆಂದರೂ ಬಿಡದೆ ಸುರಿದ ಮಳೆಯ ದಿನಗಳ ನೆನಪು ಇನ್ನೂ ಹಚ್ಚಗಿರುವಾಗಲೇ, ಆ ಆರ್ದ್ರತೆಯನ್ನು ಆವಿಯಾಗಿಸುವಂತೆ ಧಗೆಯ ಕೆನ್ನಾಲಗೆಗಳು ನಾಡಿನ ವಿವಿಧ ಭಾಗಗಳಲ್ಲಿ ಚಾಚಿಕೊಳ್ಳುತ್ತಿವೆ. ಅಗುಳಿನ ಮೇಲೆ ಅನ್ನದ ಪರೀಕ್ಷೆ ಎನ್ನುವಂತೆ, ಈ ದಿನಗಳ ಧಗೆಯ ಆಧಾರದ ಮೇಲೆ ನಾಳಿನ ಬಿಸಿಲುಗಾಲವನ್ನು ಊಹಿಸಬಹುದು. ನಾಡಿನ ಹವಾಮಾನದ ನಕಾಶೆಯನ್ನು ಗಮನಿಸಿ: ಬಹುತೇಕ ಜಿಲ್ಲೆಗಳಲ್ಲಿನ ತಾಪಮಾನ 30 ಡಿಗ್ರಿ ಸೆಲ್ಸಿಯಸ್ ದಾಟಿದೆ. ಕಲಬುರಗಿ ಹಾಗೂ ಹಾವೇರಿ ಫೆಬ್ರುವರಿ ಆರಂಭದಲ್ಲೇ 37 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದೆ. ಉಳಿದ ಜಿಲ್ಲೆಗಳಲ್ಲಿನ ತಾಪಮಾನವೂ ಫೆಬ್ರುವರಿ ಕೊನೆಯ ವೇಳೆಗೆ 35 ಡಿಗ್ರಿ ಸೆಲ್ಸಿಯಸ್ ಆಸುಪಾಸು ಮುಟ್ಟಬಹುದೆಂದು ಹವಾಮಾನ ಇಲಾಖೆ ಅಂದಾಜು ಮಾಡಿದೆ. ಬೆಂಗಳೂರಿನಲ್ಲಿ ನಸುಕಿನ ನಡುಕವನ್ನು ಹೊರತುಪಡಿಸಿದರೆ ಉಳಿದಂತೆ ಒಣ ಹವೆಯೇ ಇದೆ. ಕರಾವಳಿ ಪ್ರದೇಶ ಕಾವಲಿಯ ಸ್ವರೂಪವನ್ನು ಪಡೆದುಕೊಳ್ಳುತ್ತಿದೆ.

ಕಳೆದ ವರ್ಷದ ಬೇಸಗೆ ಅಸಹನೀಯವಾಗಿತ್ತು. ರಾಜ್ಯದ ಬಹುತೇಕ ಪ್ರದೇಶಗಳಲ್ಲಿನ ಉಷ್ಣಾಂಶ 40 ಡಿಗ್ರಿ ಸೆಲ್ಸಿಯಸ್ ದಾಟಿತ್ತು; ಕೆಲವು ಪ್ರದೇಶಗಳಲ್ಲಿನ ತಾಪಮಾನ 50 ಡಿಗ್ರಿ ಸೆಲ್ಸಿಯಸ್ ಮುಟ್ಟಲು ಪೈಪೋಟಿ ನಡೆಸಿದಂತಿತ್ತು. ಆದರೆ, ಬಿಸಿಲು ದಿನಗಳ ಬೆನ್ನಿಗೆ ಕಾಣಿಸಿಕೊಂಡ ಸುದೀರ್ಘ ಮಳೆಗಾಲ ಬೇಸಗೆಯ ಝಳದ ಸುಡುನೆನಪುಗಳಿಂದ ಹೊರಬರಲು ಕಾರಣವಾಗಿತ್ತು. ಈಗ, ಮಳೆಯ ಆರ್ದ್ರತೆಯನ್ನೆಲ್ಲ ಮರೆಸುವಂತೆ ಸುಡುಬಿಸಿಲು. ಈಗಿನ ಸೂಚನೆಗಳನ್ನು ನೋಡಿದರೆ ಮುಂದಿನ ಮಾರ್ಚ್, ಏಪ್ರಿಲ್ ಹಾಗೂ ಮೇ ತಿಂಗಳುಗಳು ಅಗ್ನಿಕುಂಡದಂತೆ ಪರಿಣಮಿಸಿದರೆ ಆಶ್ಚರ್ಯವೇನೂ ಇಲ್ಲ.

ಸುಡುಬಿಸಿಲಿನ ಪರಿಣಾಮ ಬೇರೆ ಬೇರೆ ರೂಪದಲ್ಲೂ ಕಾಣಿಸಿಕೊಳ್ಳುತ್ತಿದೆ. ಸಾಮಾನ್ಯವಾಗಿ ಬೇಸಗೆಯ ತೀವ್ರತೆಯ ದಿನಗಳಲ್ಲಿ ಕಾಣಿಸಿಕೊಳ್ಳುವ ತೀವ್ರ ಅತಿಸಾರ (ಅಕ್ಯೂಟ್ ಡಯೇರಿಯಾ) ಫೆಬ್ರುವರಿ ಆರಂಭದಲ್ಲೇ ಕಾಣಿಸಿಕೊಂಡಿದೆ. ನಿರ್ಜಲೀಕರಣ, ವಾಕರಿಕೆ, ವಾಂತಿ, ದಣಿವು, ಮುಂತಾದ ಲಕ್ಷಣಗಳುಳ್ಳ ಅತಿಸಾರ ಬಾಧಿತರ ಪ್ರಕರಣಗಳು ಸಾವಿರಾರು ಸಂಖ್ಯೆಯಲ್ಲಿ ದಾಖಲಾಗುತ್ತಿವೆ ಎಂದು ಆರೋಗ್ಯ ಇಲಾಖೆ ಹೇಳಿದೆ. ಕಲುಷಿತ ನೀರು ಸೇವನೆ ಹಾಗೂ ದೂಳು ಅತಿಸಾರಕ್ಕೆ ಮುಖ್ಯ ಕಾರಣಗಳು. ಕಳೆದ ವರ್ಷ ಮಾರ್ಚ್ ತಿಂಗಳಲ್ಲಿ ಪ್ರತಿ ವಾರ ಸುಮಾರು ಮೂರು ಸಾವಿರ ಅತಿಸಾರ ಪ್ರಕರಣಗಳು ದಾಖಲಾಗುತ್ತಿದ್ದವು. ಆ ಪ್ರಮಾಣ ಈಗ ಫೆಬ್ರುವರಿ ಆರಂಭದಲ್ಲೇ ದಾಖಲಾಗುತ್ತಿದೆ.

ಜನರ ಆರೋಗ್ಯ ಮಾತ್ರವಲ್ಲ, ಪರಿಸರದ ಮೇಲೂ ಬೇಸಗೆಯ ಪರಿಣಾಮ ಕಾಣಿಸಿಕೊಳ್ಳತೊಡಗಿದೆ. ಪಶುಪಕ್ಷಿಗಳಿಗೆ ಕುಡಿಯುವ ನೀರಿನ ಕೊರತೆ ಸಣ್ಣ ಪ್ರಮಾಣದಲ್ಲಿ ಕಾಣಿಸಿಕೊಳ್ಳುತ್ತಿದೆ. ಇದರ ಜೊತೆಗೆ, ಕಾಳ್ಗಿಚ್ಚಿನ ಸಣ್ಣ ಪುಟ್ಟ ಪ್ರಕರಣಗಳು ಅಲ್ಲಲ್ಲಿ ವರದಿಯಾಗಿವೆ. ಬೇಸಗೆಯ ಉಷ್ಣಾಂಶ ಹೆಚ್ಚಳದೊಂದಿಗೆ ಈ ಸಮಸ್ಯೆಗಳೂ ಹೆಚ್ಚಾಗಲಿವೆ. ಆ ಕಾರಣದಿಂದಾಗಿ, ತಾಪಮಾನ ಬದಲಾವಣೆಯ ಪರಿಣಾಮಗಳನ್ನು ಎದುರಿಸಲು ಸರ್ಕಾರ ಈಗಿನಿಂದಲೇ ಸಿದ್ಧತೆಗಳನ್ನು ಮಾಡಿಕೊಳ್ಳುವುದು ಅಗತ್ಯ. ವಿದ್ಯುತ್ ಕೊರತೆ ಎದುರಾಗದಂತೆ ಎಚ್ಚರಿಕೆ ವಹಿಸಬೇಕು. ಮಕ್ಕಳು ಮತ್ತು ಹಿರಿಯ ನಾಗರಿಕರ ಆರೋಗ್ಯದ ಬಗ್ಗೆ ಆರೋಗ್ಯ ಇಲಾಖೆ ವಿಶೇಷ ಕಾಳಜಿ ವಹಿಸಬೇಕು.

ಕಳೆದ ಬೇಸಗೆ ಕಲಿಸಿದ ಪಾಠಗಳನ್ನು ಸರ್ಕಾರ ಹಾಗೂ ಸಮಾಜ ಸುಲಭಕ್ಕೆ ಮರೆಯಬಾರದು. 2024ರ ಬೇಸಗೆಯಲ್ಲಿ ನಾಗರಹೊಳೆ ಹಾಗೂ ಬಂಡೀಪುರ ಅರಣ್ಯ ಪ್ರದೇಶಗಳಲ್ಲಿ ಮೈಲಿಗಟ್ಟಲೆ ನಡೆದರೂ ನೀರಿನ ಪಸೆ ಕಾಣದೆ ಆನೆಗಳು ಸಾವನ್ನಪ್ಪಿದ್ದವು ಹಾಗೂ ನಿರ್ಜಲೀಕರಣದಿಂದ ಪ್ರಾಣಿ ಪಕ್ಷಿಗಳು ಸಾವಿಗೀಡಾದ ಪ್ರಕರಣಗಳು ವರದಿಯಾಗಿದ್ದವು. ಪಶ್ಚಿಮ ಘಟ್ಟದ ನಿತ್ಯಹರಿದ್ವರ್ಣ ಕಾಡಿನ ಕೆಲವು ಸಸ್ಯಗಳು ವಾತಾವರಣ ವೈಪರೀತ್ಯದಿಂದ ಏದುಸಿರು ಬಿಡುತ್ತಿರುವ ವಿಷಯವನ್ನು ತಜ್ಞರು ಗುರ್ತಿಸಿದ್ದರು. ನೀರಿನ ತೀವ್ರ ಕೊರತೆ ಎದುರಿಸಿದ್ದ ಕರಾವಳಿ ಪ್ರದೇಶ, ಬೇಸಗೆ ರಜೆಯಲ್ಲಿ ಧಾವಿಸುತ್ತಿದ್ದ ಪ್ರವಾಸಿಗರ ಅಗತ್ಯಗಳಿಗೆ ನೀರು ಒದಗಿಸಲು ಸಾಧ್ಯವಾಗದೆ ಪರದಾಡಿತ್ತು. ಪವಿತ್ರಕ್ಷೇತ್ರಗಳಿಗೆ ಭೇಟಿ ಕೊಟ್ಟ ಭಕ್ತರು, ಗುಂಡಿಗಳ ರಾಡಿಯಲ್ಲಿ ಮೀಯುವ ಅನಿವಾರ್ಯತೆ ಸೃಷ್ಟಿಯಾಗಿತ್ತು. ಈ ಕಹಿ ನೆನಪುಗಳು ಬೇಸಗೆಯ ತೀವ್ರತೆಯಲ್ಲಿ ಮತ್ತೆ ಯಾವಾಗ ಬೇಕಾದರೂ ಜೀವಂತಗೊಳ್ಳಬಹುದು. ಅಂಥ ಪರಿಸ್ಥಿತಿ ಒದಗದಂತೆ ಅಥವಾ ಪರಿಸ್ಥಿತಿ ಹದಗೆಡದಂತೆ ಎಚ್ಚರ ವಹಿಸಬೇಕಾದ ಜಾಗರೂಕತೆಯನ್ನು ಸರ್ಕಾರ ವಹಿಸಬೇಕು ಹಾಗೂ ನೀರಿನ ಮಿತವಾದ ಬಳಕೆ ಸೇರಿದಂತೆ ಪರಿಸರ ಸಂರಕ್ಷಣೆಯ ಹೊಣೆಗಾರಿಕೆಯನ್ನು ಜನರೂ ಪ್ರದರ್ಶಿಸಬೇಕಾಗಿದೆ.

ಉಷ್ಣಾಂಶವನ್ನು ನಿಯಂತ್ರಿಸುವುದಂತೂ ಜನಸಾಮಾನ್ಯರ ಕೈಲಿ ಉಳಿದಿಲ್ಲ; ಕನಿಷ್ಠ ನಮ್ಮ ಎದೆಗಳಲ್ಲಿನ ಆರ್ದ್ರತೆಯನ್ನಾದರೂ ಉಳಿಸಿಕೊಳ್ಳುವ ಪ್ರಯತ್ನದಲ್ಲಿ ಸೋಲದೆ ಹೋದರೆ ಬೇಸಗೆಯ ತೀವ್ರತೆ ಕೊಂಚವಾದರೂ ಸಹನೀಯವಾದೀತು.

■ ರಘುನಾಥ ಚ.ಹ.

ಕಳೆದ ಬೇಸಗೆ ಕಲಿಸಿದ ಪಾಠಗಳನ್ನು ಸರ್ಕಾರ ಹಾಗೂ ಸಮಾಜ ಸುಲಭಕ್ಕೆ ಮರೆಯಬಾರದು. ಕಹಿ ನೆನಪುಗಳು ಬೇಸಗೆಯ ತೀವ್ರತೆಯಲ್ಲಿ ಯಾವಾಗ ಬೇಕಾದರೂ ಜೀವಂತಗೊಳ್ಳಬಹುದು. ಪರಿಸ್ಥಿತಿ ಹದಗೆಡದಂತೆ ಸರ್ಕಾರ ಎಚ್ಚರ ವಹಿಸಬೇಕು ಹಾಗೂ ನೀರಿನ ಮಿತವಾದ ಬಳಕೆಯ ವಿವೇಕವನ್ನು ಜನ ಪ್ರದರ್ಶಿಸಬೇಕು.

